**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 18.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ವ್ಯವಹಾರ ಮಾಡುತ್ತೇನೆ. ಅದನ್ನು ಹೊರತುಪಡಿಸಿ ನಾನು ಬೇರೆ ಕೆಲಸ ಮಾಡುವುದಿಲ್ಲ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಯಶ್ ಡೆವಲಪರ್ಸ ಹೆಸರಿನಲ್ಲಿ ಸಂಸ್ಥೆ ನಡೆಸುತ್ತಿದ್ದೇನೆ ಎಂದರೆ ಸರಿ. ಕಳೆದ 18 ರಿಂದ 20 ವರ್ಷಗಳಿಂದ ನಾನು ಸದರಿ ಸಂಸ್ಥೆ ನಡೆಸುತ್ತಿದ್ದೇನೆ. ಸದರಿ ಸಂಸ್ಥೆಯ ಮೂಲಕ ನಾನು ಜಮೀನು ಖರೀದಿಸುವುದು ಹಾಗೂ ಅವುಗಳನ್ನು ಅಭಿವೃದ್ಧಿಪಡಿಸಿ ಮಾರಾಟ ಮಾಡುವುದನ್ನು ಮಾಡುತ್ತೇನೆ. ಸದರಿ ಸಂಸ್ಥೆಯ ಪರವಾಗಿ ಕೃಷಿ ಹಾಗೂ ಕೃಷಿಯೇತರ ಜಮೀನು ಎರಡು ಸಹ ನಾನು ಖರೀದಿಸುತ್ತೇವೆ. ಸದರಿ ಸಂಸ್ಥೆಯ ಪರವಾಗಿ ನಾನು ಇದುವರೆಗೆ ಎಷ್ಟು ಜಮೀನುಗಳನ್ನು ಖರೀದಿಸಿರುತ್ತೇನೆಂದು ನನಗೆ ಹೇಳಲು ಬರುವುದಿಲ್ಲ. ಲೇಔಟ್ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ನಾನು ಸದರಿ ಸಂಸ್ಥೆಯ ಪರವಾಗಿ ಜಮೀನು ಖರೀದಿಸುತ್ತೇನೆ. ಹೆಚ್ಚಾಗಿ ನಾನು ಶೇತ್ಕಿ ಜಮೀನುಗಳನ್ನು ಖರೀದಿಸುತ್ತೇನೆ ಎಂದರೆ ಸರಿ. ದಾವಾ ಆಸ್ತಿ ಶೇತ್ಕಿ ಜಮೀನು ಎಂದರೆ ಸರಿ.

2. ಪ್ರಸ್ತುತ ದಾವೆಯ ಖರೀದಿ ಪತ್ರವನ್ನು ನಾನು ನನ್ನ ಸ್ವಂತ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತೇನೆ ಸಂಸ್ಥೆಯ ಹೆಸರಿನಲ್ಲಿ ಮಾಡಿಸಿಕೊಂಡಿಲ್ಲ. ದಾವಾ ಆಸ್ತಿ ಸುತಗಟ್ಟಿಯಲ್ಲಿದೆ. ಅದರ ಸರ್ವೆ ನಂ.39/4 ಆಗಿರುತ್ತದೆ. ಅದರ ಕ್ಷೇತ್ರ 3 ಎಕರೆ 2 ಗುಂಟೆ ಆಗಿರುತ್ತದೆ. ಪ್ರತಿವಾದಿಗಳು ನನಗೆ 24 ಗುಂಟೆ ಜಮೀನು ಮಾರಾಟ ಮಾಡಲು ಒಪ್ಪಿರುತ್ತಾರೆ. ದಾವಾ ಆಸ್ತಿಯ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ವಾದಪತ್ರದಲ್ಲಿ ಪೂರ್ತಿ 3 ಎಕರೆ 2 ಗುಂಟೆ ಜಮೀನಿನ ಚಕಬಂದಿಯನ್ನು ತೋರಿಸಿರುತ್ತೇನೆ ಎಂದರೆ ಸರಿ. 24 ಗುಂಟೆ ಜಮೀನಿನ ಚಕಬಂದಿಯನ್ನು ನೀವು ವಾದಪತ್ರದಲ್ಲಾಗಲೀ ಅಥವಾ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಾಗಲೀ ನಮೂದಿಸಿಲ್ಲ ಎಂದರೆ ಸಾಕ್ಷಿ ಹೌದು ವಾಟ್ನಿ ಆಗಿಲ್ಲ ಹಾಗಾಗಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ.

3. ಪ್ರತಿವಾದಿಗಳ ಜೊತೆ ಖರೀದಿ ಕರಾರುಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ಸಮಯದಲ್ಲಿ ಅದಕ್ಕೆ ಯಾರು ಯಾರು ಮಾಲೀಕರು ಆಗಿದ್ದರು ಎಂದರೆ ಸಾಕ್ಷಿ ಪ್ರತಿವಾದಿ ನಂ.1 ಹಾಗೂ ಇತರರು ಆಗಿರುತ್ತಾರೆ. ಪ್ರತಿವಾದಿ ನಂ.1 ರಿಂದ 6 ಮಾತ್ರ ಅದರ ಮಾಲೀಕರು ಎಂದರೆ ಸರಿ. ಪ್ರತಿವಾದಿಗಳ ಜೊತೆ ಖರೀದಿ ಕರಾರುಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನಾನು ಪತ್ರಿಕಾ ಪ್ರಕಟಣೆ ನೀಡಿರುವುದಿಲ್ಲ. ದಾವಾ ಆಸ್ತಿಯ ವಿಷಯವಾಗಿ ಪ್ರತಿವಾದಿಗಳು ನನ್ನ ಜೊತೆ ಯಾವುದೇ ಖರೀದಿ ಕರಾರುಪತ್ರ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮುಗ್ದತೆಯನ್ನು ದುರುಪಯೋಗಪಡಿಸಿಕೊಂಡು ಖೊಟ್ಟಿ ಖರೀದಿ ಕರಾರುಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**